# Form No.4.
# Deposition Sheet( R.P.52)

**ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯ, ಕಾರ್ಕಳ.**

**M.V.C. 1046/2024**
**PW 2**

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾ. ಮೋನಪ್ಪ ನಾಯ್ಕ |
| ತಂದೆ ಹೆಸರು | ಃ | ಐತು ನಾಯ್ಕ |
| ಪ್ರಾಯ | ಃ | 57 ವರ್ಷ |
| ಉದ್ಯೋಗ | ಃ | ಅಸಿಸ್ಟೆಂಟ್ ಪ್ರೋಫೆಸರ್ ಅರ್ಥೋಪೆಡಿಕ್ಸ್, ಕೆಎಂಸಿ ಆಸ್ಪತ್ರೆ, ಮಣಿಪಾಲ |
| ವಾಸ | ಃ | ಮಣಿಪಾಲ |

ದಿನಾಂಕಃ **30.07.2026** ಪಿಡಬ್ಲ್ಯೂ - 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆಃ</u> ಶ್ರೀ ಬಿ.ಎಸ್.ಎಸ್., ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಸಾಕ್ಷಿದಾರ. ನ್ಯಾಯಾಲಯದ ಸಮನ್ಸ್ ಮೇರೆಗೆ ಈ ಕೇಸಿನಲ್ಲಿ ಹಾಜರಾಗಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಅರ್ಜಿದಾರರಾದ ರವರು ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಅವರಿಗೆ ಸಂಬಂಧಿಸಿದ ಕೇಸ್ ಶೀಟ್‌ನ್ನು ಹಾಜರುಪಡಿಸಿದ್ದು, ನಿಪಿ - 15 ಎಂದು,

ಮೂರು ಎಕ್ಸರೇಗಳನ್ನು ನಿಪಿ - 16 ಎಂದು, ನಿಪಿ - 13 ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನಾನು ನೀಡಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 13(ಎ) ಎಂದು, ನಿಪಿ - 14 ಚಿಕಿತ್ಸಾ ಪ್ರಮಾಣ ಪತ್ರವನ್ನು ನಾನು ನೀಡಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ - 14(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀಮತಿ ಕೆ.ಎಸ್.,/ಎಂ.ಆರ್., 3 ನೇ ಎದುರುದಾರರ ಪರ ವಕೀಲರಿಂದಃ

ನಿಪಿ - 7 ರಲ್ಲಿ ನನ್ನ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ - 13 ಮತ್ತು 14 ರ ಹೊರತಾಗಿ ಬೇರೆ ಯಾವುದೇ ವೈದ್ಯಕೀಯ ದಾಖಲೆಗಳಲ್ಲಿ ನನ್ನ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ನಿಪಿ - 15 ರಲ್ಲಿ ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ -13 ಮತ್ತು ನಿಪಿ - 14 ನ್ನು ಜಾರಿ ಮಾಡುವಾಗ ನಾನು ದಿಃ 17.10.2025 ರಂದು ಗಾಯಾಳುವನ್ನು ಚಿಕಿತ್ಸೆಗೆ ಒಳಪಡಿಸಿರುತ್ತೇನೆ. ನಿಪಿ - 14 ದಾಖಲೆಯಲ್ಲಿ ತೋರಿಸಿದ ಎಲ್ಲಾ ದಿನಾಂಕಗಳಂದು ಗಾಯಳುವಿಗೆ ಚಿಕಿತ್ಸೆ ನೀಡಿರುತ್ತೇನೆ. ಅರ್ಜಿದಾರರರಿಗೆ ನಾನು ಚಿಕಿತ್ಸೆ ನೀಡಿರುವುದಿಲ್ಲ. ಡಾ. ಸೌರಭ್ ಶೆಟ್ಟಿಯವರು ಅವರಿಗೆ ಚಿಕಿತ್ಸೆ ನೀಡಿರುತ್ತಾರೆ ಎಂದರೆ ಸದರಿ ವೈದ್ಯರು ನಮ್ಮ ವೈದ್ಯಕೀಯ ತಂಡದ ಸದಸ್ಯರು ಎಂದು ನುಡಿಯುತ್ತೇನೆ. ನಾನು ಗಾಯಾಳುವಿಗೆ ಚಿಕಿತ್ಸೆ ನೀಡಿದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು

ಅಪಘಾತವಾಗುವ ಸಮಯದಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿರುತ್ತದೆ. ನಾನು ನೀಡಿದ ಅಂಗನ್ಯೂನ್ಯತಾ ಪ್ರಮಾ ಣಪತ್ರದ ಪ್ರಕಾರ ಅರ್ಜಿದಾರರು ಮಾಡುವ ಕೆಲಸಕ್ಕೆ ಯಾವುದೇ ತೊಂದರೆಯಾಗಿಲ್ಲ ಎಂದರೆ ನಾನು ಹೇಳಲು ಬರುವುದಿಲ್ಲ. ಹೆಚ್ಚಿನ ಪರಿಹಾರ ಪಡೆಯಲು ಅರ್ಜಿದಾರರರಿಗೆ ಸಹಾಯ ಮಾಡಲು ಹೆಚ್ಚಿ ನ ಅಂಗನ್ಯೂನ್ಯತೆ ತೋರಿಸಿ ಸುಳ್ಳು ಪ್ರಮಾಣ ಪತ್ರವನ್ನು ಜಾರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ - 16 ಗಾಯಗಳುವಿಗೆ ಸಂಬಂದಿಚಿಸಿದ ದಾಖಲೆಗಳಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಹಾಗೂ ಅಂಗನ್ಯೂನ್ಯತಾ ಪ್ರಮಾಣಪತ್ರಕ್ಕೆ ಪೂರಕವಾಗಿ ಸಾಕ್ಷಿ ನುಡಿಯುವ ಉದ್ದೇಶದಿಂದ ಪ್ರಮಾಣ ಪತ್ರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರಮಾಣ ಪತ್ರದಲ್ಲಿ ಹೇಳಿದ ಅಂಗನ್ಯೂನ್ಯತೆ ಅರ್ಜಿದಾರರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ